ಕಾಮಗಾರಿಗಳಾಗಿ ಪರಿಗಣಿಸಿದೆ. ಈ ಸಂಬಂಧ ಪ್ರಸಕ್ತ ಸಾಲಿನಲ್ಲಿ ಅನುದಾನ ಲಭ್ಯವಿಲ್ಲದ ಕಾರಣ ಹೊಸ ಕಾಮಗಾರಿಯನ್ನು ಕೈಗೊಳ್ಳಲು ಸಾಧ್ಯವಾಗಿರುವುದಿಲ್ಲ.

4) 2001-02ನೇ ಸಾಲಿನಲ್ಲಿ 3054 ರಸ್ತೆ ಮತ್ತು ಸೇತುವೆಗಳು ಲೆಕ್ಕ ಶೀರ್ಷಿಕೆಯಡಿಯಲ್ಲಿ ಅನುಷ್ಠಾನಗೊಳಿಸಿ ಪ್ರಸಕ್ತ ಸಾಲಿಗೆ ಮುಂದುವರೆದ ಕಾಮಗಾರಿಗಳ ವಿವರಗಳು ಈ ಕೆಳಕಂಡಂತಿರುತ್ತದೆ.

ಕ್ರ.ಸಂ	ತಾಲ್ಲೂಕು	ಕಾಮಗಾರಿಗಳ ಸಂಖ್ಯೆ	ಅಂದಾಜು ಮೊತ್ತ (ರೂ.ಲಕ್ಷಗಳಲ್ಲಿ)
1	ಆನೇಕಲ್	89	123.98
2	ಬೆಂಗಳೂರು ಉತ್ತರ	118	228.22
3	ಬೆಂಗಳೂರು ದಕ್ಷಿಣ	241	183.53
	ಒಟ್ಟು	448	835.73

ಗ್ರಾಮ ಪಂಚಾಯ್ತಿಗಳ ಸಬಲೀಕರಣ

296 (264) ಶ್ರೀ ಪಾಟೀಲ್ ಡಿ.ಆರ್. (ಗದಗ್) - ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಗ್ರಾಮ ಪಂಚಾಯಿತಿ ಹಾಗೂ ಗ್ರಾಮ ಸಭೆಗಳನ್ನು ಸಬಲೀಕರಣಗೊಳಿಸುವ ಸರಕಾರದ ಇಚ್ಛೆ ಈಗಲೂ ಈಡೇರದಿರಲು ಇರುವ ತೊಂದರೆಗಳೇನು ;

ಆ) ಸರಕಾರ ಅಧಿಕಾರ ವಿಕೇಂದ್ರೀಕರಣ ವ್ಯವಸ್ಥೆಗೆ ಬದ್ಧವಾಗಿದೆಯೇ ; ಬದ್ಧವಾಗಿದ್ದಲ್ಲಿ, ಆರ್.ಡಿ.ಪಿ.ಆರ್. ವಿಷಯ ಸಮಿತಿ ಮಾಡಿರುವ ಶಿಫಾರಸ್ಸುಗಳನ್ನು ತುರ್ತಾಗಿ ಅನುಷ್ಠಾನಗೊಳಿಸಲಾಗುವುದೇ ?

ಶ್ರೀ ಎಂ.ವೈ. ಘೋರ್ಪಡೆ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು)

ಅ) ಯಾವ ತೊಂದರೆಯೂ ಇರುವುದಿಲ್ಲ.

ಆ) ವಿಕೇಂದ್ರೀಕರಣ ವ್ಯವಸ್ಥೆಗೆ ಬದ್ಧವಾಗಿದೆ. ಸರಕಾರವು ರಚಿಸಿದ ಕಾರ್ಯಪಡೆಯ ವರದಿಯ ಆಧಾರದ ಮೇಲೆ ಒಟ್ಟು 47 ತಿದ್ದುಪಡಿಗಳುಳ್ಳ ವಿಧೇಯಕವನ್ನು ವಿಧಾನಸಭೆಯ ಅಧಿವೇಶನದಲ್ಲಿ ಈಗಾಗಲೇ ಮಂಡಿಸಲಾಗಿದೆ. ವಿಷಯ ಸಮಿತಿ ಮಾಡಿರುವ ಶಿಫಾರಸ್ಸುಗಳನ್ನು ಜಾರಿಗೊಳಿಸುವ ಬಗ್ಗೆ ಕ್ರಮ ಕೈಗೊಳ್ಳಲಾಗುತ್ತಿದೆ.

ರಾಜ್ಯದಲ್ಲಿ ಬಿಸಿ ಊಟ ಯೋಜನೆ

298 (543) ಶ್ರೀ ಪಾಟೀಲ್ ಶಿವಾನಂದ ಸಿದ್ದರಾಮಗೌಡ (ತಿಕೋಟ) - ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ರಾಜ್ಯದಲ್ಲಿ "ಬಿಸಿ ಊಟ ಯೋಜನೆ" ಜಾರಿಯಲ್ಲಿದೆಯೇ ; ಇದನ್ನು ಯಾವಾಗ ಪ್ರಾರಂಭಿಸಲಾಯಿತು ;

ಆ) ರಾಜ್ಯದ ಯಾವ ಜಿಲ್ಲೆಗಳಲ್ಲಿ "ಬಿಸಿ ಊಟ ಯೋಜನೆ"ಯನ್ನು ಅನುಷ್ಠಾನ ಗೊಳಿಸಲಾಗಿದೆ ; (ಜಿಲ್ಲಾವಾರು ಶಾಲೆಗಳ ಪಟ್ಟಿ ಒದಗಿಸುವುದು) ;

ಇ) ಸರ್ಕಾರ "ಬಿಸಿ ಊಟ ಯೋಜನೆ"ಯನ್ನು ಪ್ರಾರಂಭಿಸಿರುವ ಉದ್ದೇಶಗಳೇನು ;

ಈ) ಇದಕ್ಕಾಗಿ ಸರ್ಕಾರ ಒದಗಿಸಲಾಗಿರುವ ಅನುದಾನ ಎಷ್ಟು ;

ಉ) ಈಗಾಗಲೇ "ಬಿಸಿ ಊಟ ಯೋಜನೆ"ಯಡಿಯಲ್ಲಿ ಸರ್ಕಾರ ಜಿಲ್ಲೆಗಳಲ್ಲಿ ಸಾಧಿಸಲಾಗಿರುವ ಪ್ರಗತಿ ಏನು ;

ಊ) ಸರ್ಕಾರ ಇನ್ನೂ ಕೆಲವು ಶಾಲೆಗಳಲ್ಲಿ "ಬಿಸಿ ಊಟ ಯೋಜನೆ" ಅನುಷ್ಠಾನ ಗೊಳಿಸದೇ ಇರುವುದೇ ; ಹಾಗಿದ್ದರೆ ಇದಕ್ಕೆ ಕಾರಣಗಳೇನು?

ಪ್ರೊ।। ಬಿ.ಕೆ. ಚಂದ್ರಶೇಖರ್ (ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ರಾಜ್ಯ ಸಚಿವರು)

ಅ) ಹೌದು, ರಾಜ್ಯದ ಈಶಾನ್ಯವಲಯದ 7 ಜಿಲ್ಲೆಗಳಲ್ಲಿ, ಈ ಯೋಜನೆಯನ್ನು ಔಪಚಾರಿಕವಾಗಿ 7 ಜಿಲ್ಲೆಗಳಲ್ಲಿ ದಿನಾಂಕ 9-11-2002 ಉದ್ಘಾಟಿಸಿದ್ದು ದಿನಾಂಕ 1.6.2002 ರಿಂದ ಪೂರ್ಣ ಪ್ರಮಾಣದಲ್ಲಿ ಅನುಷ್ಠಾನಗೊಳಿಸಲಾಗುತ್ತಿದೆ.

ಆ) ಬಾಗಲಕೋಟೆ, ಬಳ್ಳಾರಿ, ಬಿಜಾಪುರ, ಬೀದರ್, ಗುಲ್ಬರ್ಗಾ, ಕೊಪ್ಪಳ, ಮತ್ತು ರಾಯಚೂರು ಜಿಲ್ಲೆಗಳಲ್ಲಿ ಜಾರಿಯಲ್ಲಿದೆ.

ಜಿಲ್ಲಾವಾರು ಶಾಲೆಗಳ ಸಂಖ್ಯೆಯನ್ನು ಈ ಕೆಳಕಂಡಂತೆ ನೀಡಿದೆ

1)	ಬಾಗಲಕೋಟೆ	-	1100 ಶಾಲೆಗಳು
2)	ಬಳ್ಳಾರಿ	-	1278 ಶಾಲೆಗಳು
3)	ಬಿಜಾಪುರ	-	1506 ಶಾಲೆಗಳು
4)	ಬೀದರ್	-	891 ಶಾಲೆಗಳು
5)	ಗುಲ್ಬಾರ್ಗಾ	-	2158 ಶಾಲೆಗಳು
6)	ಕೊಪ್ಪಳ	-	865 ಶಾಲೆಗಳು
7)	ರಾಯಚೂರು	-	1167 ಶಾಲೆಗಳು
	ಒಟ್ಟು	-	8965 ಶಾಲೆಗಳು

ಇ) 1) ಶಾಲೆಗಳಲ್ಲಿ ಮಕ್ಕಳ ದಾಖಲಾತಿ ಮತ್ತು ಹಾಜರಾತಿಯನ್ನು ಉತ್ತಮಪಡಿಸುವುದು;

2) ಶೈಕ್ಷಣಿಕ ವರ್ಷದ ಮಧ್ಯದಲ್ಲಿ ಶಾಲೆ ಬಿಡುವ ಮಕ್ಕಳ ಸಂಖ್ಯೆಯನ್ನು ಗಣನೀಯವಾಗಿ ಕಡಿಮೆ ಮಾಡುವುದು.

3) ಮಕ್ಕಳಲ್ಲಿ ಪೌಷ್ಟಿಕತೆಯಲ್ಲಿ ಉತ್ತಮಪಡಿಸುವುದು;

ಈ) ರೂ. 45.00 ಕೋಟಿಗಳು.

ಉ) ಈ ಯೋಜನೆಯನ್ನು ಮೌಲ್ಯಮಾಪನ ಮಾಡಿಸಿದ ನಂತರ ಸಾಧಿಸಿರುವ ಪ್ರಗತಿ ಬಗ್ಗೆ ಗೊತ್ತಾಗುವುದು;

ಊ) ಹೌದು. ಆರ್ಥಿಕ ಮಿತಿಯಿಂದಾಗಿ ಆದಾಗ್ಯೂ ಉಳಿದ ಜಿಲ್ಲೆಗಳಲ್ಲಿ ಈ ಯೋಜನೆಯನ್ನು ಮುಂದಿನ ಶೈಕ್ಷಣಿಕ ವರ್ಷದಲ್ಲಿ ವಿಸ್ತರಿಸಲು ಸರ್ಕಾರವು ಪರಿಶೀಲಿಸುತ್ತಿದೆ.

ಬಿಜಾಪುರ ಜಿಲ್ಲೆಯಲ್ಲಿನ ಆರೋಗ್ಯ ಕೇಂದ್ರಗಳನ್ನು ಮೇಲ್ದರ್ಜೆಗೇರಿಸುವುದು

299 (544) ಶ್ರೀ ಪಾಟೀಲ್ ಶಿವಾನಂದ ಸಿದ್ದರಾಮಗೌಡ (ತಿಕೋಟ) - ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಬಿಜಾಪುರ ಜಿಲ್ಲೆಯಲ್ಲಿ ಇರುವ ಪ್ರಾಥಮಿಕ ಆರೋಗ್ಯ ಕೇಂದ್ರಗಳ ಸಂಖ್ಯೆ ಎಷ್ಟು ;